ಉಮೇದಿನಲ್ಲಿದ್ದ. ಬೆಂಡುಬತ್ತಾಸು ಖರೀದಿಸಿ, ಬಳೆ ಕೊಂಡು ಗುರಿಹಿಡಿದು ಬಾಣ ಎಸೆಯುವ ಜಾಗದಲ್ಲಿ ಸ್ವಲ್ಪ ಹಣವನ್ನೂ ಗೆದ್ದಿದ್ದನಂತೆ. ಒಂದು ಮೂಲೆಯಲ್ಲಿ ಚಿಲುಮೆ ಎಳೆಯುವ ಜಾಗದಲ್ಲಿ ಬೇಡ ಅಂದರೂ ಸೇದಿ ಮಜಾ ಮಾಡಿದ್ದ. ಎಷ್ಟೋ ಹೊತ್ತಿಗೆ ಅತ್ತಿಗೆ ಕಷ್ಟಪಟ್ಟು ಅವನನ್ನ ನಡೆಸಿಕೊಂಡು ಬಂದಳು. ತಾನು ಅವನ್ನ ಮನೆವರೆಗೆ ಕರೆದೊಯ್ಯಲು ಪಟ್ಟ ಪರಿಪಾಟಲು ನೆನಸಿಕೊಂಡರೆ ಯಾರಿಗೂ ಬೇಡ. ಭಂಗಿಯಿಂದ ಹಾಗೆಲ್ಲ ಆಗುವುದಿಲ್ಲ; ಸಾಧ್ಯವೆ ಇಲ್ಲ ಅಂತ ಎಲ್ಲಾ ತಮ್ಮ ಅನುಭವಗಳನ್ನೆ ಉದಾಹರಿಸಿ ವಾದಿಸುತ್ತಾ ಎಲ್ಲೋ ದತ್ತೂರದ ಬೀಜ ಸೇರಿರಬೇಕು; ಅದಾದರೆ ಮತ್ತೆ ಕಷ್ಟ ಅಂತ ಅಭಿಪ್ರಾಯ ಹೇಳಿದರು. ಒಟ್ಟೊ ಅಣ್ಣ ನಿದ್ದೆಯಿಂದ ಎದ್ದವ ಯಾರ ಗುರುತೂ ಹಿಡಿಯಲಿಲ್ಲ. ಶಿವಮೊಗ್ಗ, ದಾವಣಗೆರೆಯಲ್ಲಿ ತೋರಿಸಿದ್ದಾಯ್ತು. ಬೆಂಗಳೂರಿನಲ್ಲಿ ನರರೋಗದ ಆಸ್ಪತ್ರೆಯಲ್ಲಿ ಮೂರುದಿನ ಪರೀಕ್ಷೆ ಮಾಡಿದರು. ಎಲ್ಲಾ ಸರಿಯಿದೆ, ಮನಸಿನಮೇಲೆ ಒತ್ತಡ ಹಾಕಬೇಡಿ ಪರಿಚಿತ ಪರಿಸರದಲ್ಲೆ ಇರ್ಲಿ, ನೋಡುವ. ತಿಂಗಳ ನಂತರ ಮತ್ತೆ ಕರೆತನ್ನಿ ಅಂದರು.

ಮೊಬೈಲು ಸದ್ದುಮಾಡಿತು. ನೋಡಿದ. ಥುತ್ ಇವಳ್ಯಾಕೆ ಈಗ ಫೋನು ಮಾಡಿದ್ದು? ಗೊಣಗುತ್ತ ಎತ್ತಿಕೊಂಡ. ಸುರುವಿನಲ್ಲೆ ಶ್ಯಾಮಲಾ ಉದ್ವಿಗ್ನಳಾಗಿದ್ದು ಗೊತ್ತಾಯಿತು. 'ದೊಡ್ಡಣ್ಣಂಗೆ ನೆನಪು ಬಂದದಂತೆ. ಕಮಲಾಕ್ಷಿ ಈಗ ಸುದ್ದಿ ಕೊಟ್ಲು' ಕಮಲಾಕ್ಷಿ ಅಂದರೆ ಎದುರು ಬಿಲ್ಡಿಂಗಿನ ಪೇಯಿಂಗ್ ಗೆಸ್ಟ್‌ನಲ್ಲಿರೋಳು, ಅವಳದೂ ಮುರುಡೇಶ್ವರವೆ... ಈ ಅನಿಷ್ಟದ ಕಣ್ಣಿಗೆ ಬೆಳಗಿನ ಗದ್ದಲ ಬಿದ್ದಿದೆ ಹಾಗಿದ್ರೆ '... ದೇವರು ಕಣ್‌ಬಿಟ್ಟ. ನಂಗೆ ತಡಕೊಳ್ಳಿಕ್ಕಾಗತಾ ಇಲ್ಲ. ಒಂದ್ಸಲ ಅವನಿಗೆ ಫೋನು ಕೊಡೋ...' ಇದನ್ನು ಹೇಗೆ ನಿಭಾಯಿಸುವುದು ಅಂತ ಹೊಳೆಯದೆ ಚಡಪಡಿಸಿದ.

ಹಾಲಿನಲ್ಲಿ ದಿವಾನದಮೇಲೆ ಕಾಲು ಮಡಿಚಿ ಗೋಡೆ ನೋಡುತ್ತ ಮಗ್ನನಾಗಿದ್ದ ಈಶ್ವರ ಮತ್ತೇನೋ ಕಾಣುತ್ತಿದ್ದ. ಕಂಬದಿಂದ ಕಂಬಕ್ಕೆ ಕಟ್ಟಿದ ತೆಂಗಿನಹುರಿಯ ಮೂರು ನ್ಯಾಲೆಗಳು. ಅವಳು ತೊಳೆದ ವಸ್ತ್ರಗಳನ್ನು ಬುಟ್ಟಿಯಲ್ಲಿ ತರುತ್ತಾಳೆ. ಸೆರಗನ್ನು ಸುರುಳಿಮಾಡಿ ಮೊಲೆಗಳ ನಡುವಿಂದ ಹೆಗಲಮೇಲೆ ತಂದು ಹಿಂದೆ ಸಿಕ್ಕಿಸಿದ್ದಾಳೆ. ತುದಿಗಾಲಮೇಲೆ ನಿಂತು ಎರಡೂ ಕೈಯೆತ್ತಿ ಎತ್ತರದ ಹಗ್ಗದಮೇಲೆ ಸೀರೆಯನ್ನು ಹರವುದರಲ್ಲಿರುತ್ತಾಳೆ. ಶರೀರ ಬಿಲ್ಲಿನಂತೆ ಹಿಂಬಾಗಿ ಬಿಳಿಯ ತೆಳುಹೊಟ್ಟೆ ಹೊಕ್ಕುಳನ್ನು ಸೀಳಿನಂತೆ ತೆರೆದಿಟ್ಟಿದೆ. ಎದೆಗಳು ದೀರ್ಘ ಕಮಾನಾಗಿವೆ. ಮುಂಗೈಯಿಂದ ಹಣೆಯ ಮೇಲಿನ ಕೂದಲನ್ನು ಸರಿಸುತ್ತ ಮತ್ತೊಂದು ಬಟ್ಟೆಗಾಗಿ ಕೆಳಗೆ ಬಾಗುತ್ತಾಳೆ... ಈಶ್ವರನಿಗೆ ಬೆಳಗ್ಗೆ ಮಿದುಳಲ್ಲಿ ಉದ್ಭವಿಸಿದ ದರ್ಶನ ಮರುಕಳಿಸಿತು. ಉತ್ಕಂಠಿತನಾಗಿ, 'ವತ್ಸಲಾ ಆ ಮನೇಲಿ ಯಾಕಿರೂದು?' ಕೇಳಿದ. ಅವನನ್ನು ಕಾಯುತ್ತ ಕುಳಿತ ದೇವಕ್ಕ, 'ಅದು ವತ್ಸಲಾ ಅಲ್ಲ. ಆ ಮನೆ ಸೊಸೆ. ನೀನು ಒಂದೇ ಸಮ ಅವಳನ್ನ ನೋಡತಾ ಕೂಡತಿದ್ದಕ್ಕೆ ಅವಳ ಮಾವ ಜಗಳಕ್ಕೆ ಬಂದಿದ್ದ. ನೀನು ಮರದಗೊಂಬೆ ಇದ್ದಾಂಗೆ ಏನೂ ಗೊತ್ತಾಗುದಿಲ್ಲ ಅಂತ ವಿವರಿಸಿದಮೇಲೆ ಪಾಪ ಅಂತ ಪಶ್ಚಾತ್ತಾಪ ಪಟ್ಟ. ಈಗ ನಿನ್‌ಬಗ್ಗೆ ತಲೆನೆ ಕೆಡ್ಸಿಗಳೂದಿಲ್ಲ' ಅಂದಳು. ಅವಳಲ್ಲಿ ಕೂತಿದ್ದರೂ ಅವಳ ಮನಸು ರೂಮಿನ ಕಡೆಯೆ ಇತ್ತು. ಯಾರದೋ ಫೋನು ಬಂದಿದ್ದು ಗೊತ್ತಾಗಿ ಇನ್ನು ತಡೆಯಲಾಗದೆ ಎದ್ದು ರೂಮಿನ ಬಾಗಿಲ ಹತ್ತಿರವೆ ನಿಂತು ಕೇಳಿಸಿಕೊಳ್ಳುವ ಯತ್ನದಲ್ಲಿದ್ದಳು. ಯಾವ ಮಾಯದಲ್ಲೋ ಈಶ್ವರ ಅಲ್ಲಿ ಬಂದದ್ದು ಅವಳ ಗಮನಕ್ಕೆ ಬರಲೇ ಇಲ್ಲ. ರೂಮಿನಲ್ಲಿ, 'ನೋಡು ಶ್ಯಾಮಲಾ..ದೊಡ್ಡಣ್ಣ ಈಗ ಮಲಗಾನೆ. ಅಂವಗೆ ಅಶಕ್ತಿ ಅದೆ. ನಾಳೆ ಮಾತಾಡಿದ್ರಾಗೂದ...' ಅನ್ನುವ ಮಾತು ಕೇಳುತ್ತಿದ್ದಂತೆ ಬಾಗಿಲು ದೂಡಿಕೊಂಡು, 'ನಾನೆಲ್ಲಿ ಮಲಗಾನೆಯ? ಯಾರು ತಂಗಿ ಶ್ಯಾಮಲಾನ ಮಾತಾಡೂದು... ಕೊಡು ಇಲ್ಲಿ...' ಅನ್ನುತ್ತ ಫೋನು ಕಸಿದುಕೊಂಡವ ಸ್ನಾನದ ಸೋಪಿನಂತಿದ್ದ ಅಪರಿಚಿತ ವಸ್ತುವನ್ನು ನೋಡುವ ರೀತಿಗೆ ಶುಭಾ ಹತ್ತಿರಹೋಗಿ ಮೊಬೈಲನ್ನು ಅವನ ಕಿವಿಗೆ ಒತ್ತಿ 'ಜೋರಾಗಿ ಮಾತಾಡು' ಅಂದಳು.

ಅನಿರೀಕ್ಷಿತಗಳಿಂದ ಸಾವರಿಸಿಕೊಂಡ ಕೇಶವ ವಾಪಸು ಫೋನು ತೆಗೆದುಕೊಳ್ಳುವ ಸಮಯಕ್ಕೆ ಶ್ಯಾಮಲ ಉದ್ವಿಗ್ನಳಾಗಿ ನೀನು ನಮ್ಮೂರಿಗೆ ಬಾ ನಿನ್ನ ಕರುಳ ಸಂಬಂಧ ನೋಡದೆ ಎಷ್ಟು ಕಾಲ ಆಯಿತು